ಸೀತಾರಾಮಯ್ಯ (ಎಂ. ವಿ)

**ಪರಿಹಾರ ಮತ್ತು ಇತರ ಕಥೆ**

**ಸಂಕಲನ**

(ರಾಘವ ಸಾಹಿತ್ಯಮಾಲೆ – 1)

ಕ. 72 ಬೆಲೆ ರೂ 30/–

ಶ್ರೀ ಎಂ. ವಿ. ಸಿ ರವರು ವಿವಿಧ ಪ್ರಾಕಾರಗಳಲ್ಲಿ ಸಾಹಿತ್ಯ ಕೃಷಿ ಮಾಡಿ, ಹಲವಾರು ಗ್ರಂಥಗಳನ್ನು ಲೇಖನಗಳನ್ನು ಬರೆದು ಪ್ರಕಟಿಸಿದ್ದಾರೆ. ಅವರಿಂದ ಒಂಬತ್ತು ಸಣ್ಣ ಕತೆಗಳು ಸಂಕಲನಗಳು ಈಗಾಗಲೇ ಪ್ರಕಟವಾಗಿವೆ. ಪುಸ್ತಕ ಕೃತಿಯಲ್ಲಿ ಇದು ವರೆಗೆ ಪ್ರಕಟವಾಗದ ಏಳು ಸಣ್ಣ ಕಥೆಗಳನ್ನು ಸಂಕಟಿಸಲಾಗಿದೆ.

ಲಕ್ಷ್ಮಿ (ಎನ್. ಮೂರ್ತಿ)

**ಧೀಮಂತ ಮಹಿಳೆ ದಿ॥ ನಂಜಮ್ಮ : ವ್ಯಕ್ತಿ ಪರಿಚಯ**

ಕ. 96 ಬೆಲೆ ರೂ. 50/– 2012

ಈ ಕೃತಿಯಲ್ಲಿ ಬಿತ್ತಿತವಾಗಿರುವ ಮಹಿಳೆ ಶ್ರೀಮತಿ ನಂಜಮ್ಮ ಕನ್ನಡ ಕಣ್ವ ಶ್ರೀ ಬಿ. ಎಂ. ಶ್ರೀ ಅವರ ಸೋದರಿ. ಹತ್ತು ಮಕ್ಕಳನ್ನು ಹೆತ್ತು ವಿಧವೆಯಾದ ಅಸಹಾಯಕ ಮಹಿಳೆ. ಬ್ರಾಹ್ಮಣ ವಿಧವೆ ಮುಂಗನ ಮಾಡಿಸಿಕೊಂಡು ಇರಬೇಕಾದ ವಾತಾವರಣದಲ್ಲಿ ಅಣ್ಣ ಬಿ. ಎಂ. ಶ್ರೀಯವರ ಆದೇಶ ಕ್ರೂರ ವಿಧಿಗೆ ಒಳಗಾಗದಂತೆ ತಡೆಯಿತು. ಸಮಾಜದ ಕೊಂಕಿನ ನುಡಿ, ಕುಹಕ, ಕೆಂಗಣ್ಣುಗಳಿಗೆ ಮಣಿಯದೆ ಧೈರ್ಯದಿಂದ ಎದುರಿಸಿದ್ದಲ್ಲದೆ ಇನ್ನಿತರ ನಿರಾಧಾರ ಮಹಿಳೆಯರಿಗೂ ಸಮಾಜದಲ್ಲಿ ಗೌರವದಿಂದ ಬಾಳುವ ದಾರಿದೀಪ ತೋರಿದರು. ನಂಜಮ್ಮನವರ ಕಾರ್ಯ ಸಾಧನೆಯ ವೈವಿಧ್ಯತೆ, ವ್ಯಾಪಕತೆ, ಶ್ರದ್ಧೆ ಇವುಗಳನ್ನು ಕೃತಿಯ ಲೇಖಕ ನಂಜಮ್ಮನವರ ಮರಿಮಗಳು ಸವಿವರವಾಗಿ ಚಿತ್ರಿಸಿದ್ದಾರೆ.

ಸತ್ಯ ನಾರಾಯಣರಾವ್ (ಹೂ. ರಾ) ಸಂ.

**ಕವಿಗಳು ಕಂಡ ಬಿ. ಎಂ. ಶ್ರೀ : ವಿವಿಧ ಕವಿಗಳ ಕವನ ಸಂಕಲನ**

ಪು. xii+100 ಬೆಲೆ ರೂ 80/– 2012

ಆಚಾರ್ಯ ಬಿ. ಎಂ. ಶ್ರೀ ಯವರ ಮೇರು ವ್ಯಕ್ತಿತ್ವ, ಪಾಂಡಿತ್ಯ, ಸೃಜನ ಶೀಲತೆ, ಕಲ್ಪನಾಶ್ರೀಮಂತಿಕೆ, ಅಸಾಧಾರಣ ಸಾಹಿತ್ಯ ಸೃಷ್ಟಿ ಅನುಪಮ, 'ಶ್ರೀ' ಯವರು ಬರೆದದ್ದು ಕಡಿಮೆ ಆದರೆ ಅವರ ಕಾವ್ಯ, ನಾಟಕ, ಗದ್ಯ ಬರಹ, ಮುಂದಿನ ವೇಳೆಗೆಗೆ ಮಾರ್ಗದರ್ಶಿಯಾಗಿತ್ತು. 'ಬಿ. ಎಂ. ಶ್ರೀ ಯವರನ್ನು ಕುರಿತು ಹಿರಿಯ ಕಿರಿಯ ಕವಿಗಳಿಂದ ರಚಿತವಾದ ಆಯ್ದ ಅತಿ ಕವನಗಳ ಸಂಗ್ರಹ ಈ ಕೃತಿ.

ಆಂಗಯ್ಯ (ಡಿ)
**ಕನ್ನಡ ನವೋದಯ ಪ್ರವರ್ತಕ ಬಿ. ಎಂ. ಶ್ರೀಕಂಠಯ್ಯ:**
**ವ್ಯಕ್ತ ಪರಿಚಯ ಮತ್ತು ಸೂಕ್ತಗಳು (ಎರಡನೇ ಮುದ್ರಣ) [ಪ್ರಥಮ ಮುದ್ರಣ 2005]**
ಪು. 50 ಬೆಲೆ ರೂ. 30/- 2012

ಬಿ. ಎಂ. ಶ್ರೀ ಸ್ಮಾರಕ ಪ್ರತಿಷ್ಠಾನದ ಬೆಳ್ಳೂರು ಶಾಖೆಯ ಮಹಾಪೋಷಕರಾದ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಡು ಸ್ವಾಮಿಯವರ ಆಶಯದಂತೆ ರಚಿಸಿರುವ ಕಿರು ಪುಸ್ತಕ ಇದು. ಬಿ. ಎಂ. ಶ್ರೀಯವರನ್ನು ಕುರಿತು ಸಂಕ್ಷಿಪ್ತವಾದ ವಿದ್ವತ್ ಪೂರ್ಣ ಲೇಖನವಲ್ಲದೆ. ಅವರ ಆಯ್ದ ಸೂಕ್ತಗಳು ಜೀವನ ದು...ಮೈಲಿಗಲ್ಲುಗಳು ಹಾಗೂ ಅವರ ಕೃತಿಗಳ ಮಾಹಿತಿ ಒದಗಿಸಲಾಗಿದೆ.

ಆಚಾರ್ಯ (ವಿ. ಎಸ್. ಎಸ್) ಸರಿ.
**ಶ್ರೀ ಕೃಷ್ಣ ದೇವರಾಯನ ದಿನಚರಿ.**
**(ಪ್ರಧಾನ ಸಂಪಾದಕರು : ಎಂ. ವಿ. ಸೀತಾರಾಮಯ್ಯ)**
ಪು. 92 ಬೆಲೆ ರೂ. 80/- 2013

ದೇಶದ ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಇತಿಹಾಸ ರಚನೆಯಲ್ಲಿ ಶಿಲಾಶಾಸನಗಳು, ನಾಣ್ಯಗಳು, ಮಾಸ್ತಿ ವೀರಗಲ್ಲುಗಳು, ತಾದವೋಲೆ, ಭೂಜಗ ಪತ್ರ, ಪ್ರಾಚೀನ ಹಸ್ತ ಪ್ರತಿಗಳು, ಬಖೈರುಗಳೂ ಇತ್ಯಾದಿಗಳ ಪಾತ್ರೆ ಗುರುತರವಾದದ್ದು, ವಿಜಯನಗರ ಕೃಷ್ಣ ದೇವರಾಯನ ದಿನಚರಿಯ ವಿವರಗಳನ್ನು ತಾಳೆಗರಿ ಹಸ್ತ ಪ್ರತಿಯಲ್ಲಿ ನಮೂದಿಸಲಾಗಿತ್ತು. ಇದನ್ನು ಮುಕ್ಕು ತಿಮ್ಮಯ್ಯ ಮತ್ತು ಮಾದಯ್ಯನವರ ಮಲ್ಲಯ್ಯ ಎಂಬುವರು ರಾಜಾಜ್ಞೆಯಂತೆ ಬರೆದಿದ್ದಾರೆ. ಲಿಪಿ ಮತ್ತು ಭಾಷೆಯ ಆಧಾರದ ಮೇಲೆ ಇದು ಬಹುಶಃ ಕ್ರಿ. ಶ. 16ನೇ ಶತಮಾನದ ಕನ್ನಡದಲ್ಲಿರುವ ತಾಳೆಯೋಲೆ ಗ್ರಂಥವೆನ್ನಬಹುದು. ಶ್ರೀ ರಾಮಾನುಚಾಚಾರ್ಯರ ವಂದನೆಯಿಂದ ಆರಂಭವಾಗುವ ಈ ಗ್ರಂಥದಲ್ಲಿ ಅರಸನ ದಿನ ನಿತ್ಯದ ಕಾರ್ಯಗಳನ್ನು ನಮೂದಿಸಲಾಗಿದೆ.

ಭಾಸ್ಕರ್ (ಎಂ. ಎಸ್) ಸರಿ.
**ಎಂ. ವಿ. ಸೀತಾರಾಮಯ್ಯ : ಜೀವನ ಮತ್ತು ಸಾಹಿತ್ಯ ಸಾಧನೆ**
ಪು. 96 ಬೆಲೆ ರೂ. 50/- 2013

'ರಾಘವ' ಕಾವ್ಯನಾಮದಿಂದ ಪ್ರಸಿದ್ಧರಾದ ಮೈಸೂರು ವೆಂಕಟದಾಸಪ್ಪ ಸೀತಾರಾಮಯ್ಯನವರು ಆಧುನಿಕ ಕನ್ನಡ ಸಾಹಿತ್ಯವನ್ನು ಶ್ರೀ ಮಂತಗೊಳಿಸಿದ ಸಾಹಿತಿಗಳಲ್ಲಿ ಅಗ್ರಗಣ್ಯರು ಕಾವ್ಯ ಮೀಮಾಂಸೆ ಮತ್ತು ವ್ಯಾಕರಣ ಕ್ಷೇತ್ರಕ್ಕೆ ಅವರ ಕೊಡುಗೆ ಅವಿಸ್ಮರಣೀಯ ಎಂ. ವಿ. ಸೀ. ಅವರ ಶತಮಾನೋತ್ಸವ ಸಂದರ್ಭದಲ್ಲಿ ಅದರ ಕುರಿತದಂತೆ ವಿದ್ವಾಂಸರು, ಹಿತೈಷಿಗಳು ಹಾಗೂ ಶಿಷ್ಯರು ವಿಮರ್ಶಾತ್ಮಕ ಹಾಗೂ ವಿದ್ಯತ್ಪೂರ್ಣ ಲೇಖನಗಳನ್ನು ಹಲವಾರು ದಿನ ಪತ್ರಿಕೆ, ಮಾಸ ಪತ್ರಿಕೆ ಇತ್ಯಾದಿಗಳಲ್ಲಿ ಪ್ರಕಟಿಸಿದ್ದರು ಇವುಗಳಲ್ಲಿ ಕೆಲವನ್ನ ಆಯ್ಕೆ ಮಾಡಿ, ಪ್ರಸ್ತುತ ಕೃತಿಯಲ್ಲಿ ಸಂಕಲಿಸಲಾಗಿದೆ ಅಂತಿಮ ಅಧ್ಯಾಯದಲಿ ನೀಡಿರುವ ಎಂ. ವಿ. ಸೀ ಅವರ ಜೀವನ ಪಥ, ಸಾಹಿತ್ಯ ಕೃಷಿಯ ವಿವರಳು ಕನ್ನಡ ಸಾಹಿತ್ಯ ವಿದ್ಯಾರ್ಥಿಗಳಿಗೆ, ಸಂಶೋಧಕರಿಗೆ ಬಹುಉಪಯುಕ್ತ ಆಕರ ವಿವರಣೆ.

ಗೋವರ್ಧನ (ಸುಂಕಂ) ಮತ್ತು ಶ್ಯಾಮಲರತ್ನ ಕುಮಾರಿ (ಬೆಂ. .....)

**ಹಸ್ತಪ್ರತಿ ಅಧ್ಯಯನ : ಸಮಾವೇಶ ಸಂಪುಟ – 1**

ಪು. 224 ರೂ. 100/– 2012

ಹಸ್ತ ಪ್ರತಿ ಎಂದರೆ ಕೈಬರಹ, ಪುಸ್ತಕ, ಗ್ರಂಥ ಎಂಬರ್ಥವಿದೆ, ಮುದ್ರಣ ಮಾಧ್ಯಮ ಇಲ್ಲದಾಗ ವಿದ್ವಾಂಸರು ತಮ್ಮ ಚಿಂತನೆಗಳನ್ನು ಎಲೆ, ಕಾಗಿದಗಳ ಮೇಲೆ ಬರೆದರು, ಹಸ್ತ ಪ್ರತಿಗಳು ದೇಶದ ಸಾಂಸ್ಕೃತಿಕ ಸಂಸತ್ತಿನ ಪ್ರತೀಕಗಳು ಎಂದರೆ ತಪ್ಪಾಗಲಾರದು ಮಾರ್ಚ್ 26, 2011 ರಂದು ಉಜಿರೆಯಲ್ಲಿ ನಡೆದ ಪ್ರಥಮ ರಾಷ್ಟ್ರೀಯ ಹಸ್ತಪ್ರತಿ ಸಮಾವೇಶದಲ್ಲಿ ಮಂಡಿತವಾದ 25 ಸಂಶೋಧನಾ ಪ್ರಬಂಧಗಳಲ್ಲಿ 23 ಲೇಖನಗಳು ಮಾತ್ರ ಈ ಸಂಪುಟದಲ್ಲಿ ಪ್ರಕಟವಾಗಿವೆ. ಇದುವರೆಗೂ ದೊರಕದೇ ಇದ್ದ ಹೊಸ ಹಸ್ತ ಪ್ರತಿಗಳನ್ನು ಪರಿಚಯಿಸಲಾಗಿದೆ. ಗ್ರಂಥ ಸಂಪಾದನೆಯ ಕಾರ್ಯದ ಬಗ್ಗೆ ವಿವೇಚಿಸಲಾಗಿದೆ ಲಿಪಿಯ ಬಗ್ಗೆ, ಚಿತ್ರಿಕಲೆಯ ಮಾಡಲಾಗಿದೆ ಹಿರಿಯ ಕಿರಿಯ ಸಂಶೋಧಕರಾ ಬರೆದಿರುವ ಈ ಲೇಖನಗಳು ಹಸ್ತಪ್ರತಿ ಅಧ್ಯಯ ನಾಭಿಲಾಷಿಗಳಿಗೆ ಸಾಕಷ್ಟು ಉಪಯುಕ್ತ ಮಾಹಿತಿ ಒದಗಿಸುತ್ತದೆ.

ಸ್ವಾಮಿ (ಬಿ. ಎಸ್)

**ಹಸ್ತಪ್ರತಿ ಶಾಸ್ತ್ರಜ್ಞ ಎಸ್. ಶಿವಣ್ಣ**

**(ಸಾಹಿತಿ ವಿದ್ವಾಂಸರ ಕಿರು ಪುಸ್ತಕ ಮಾಲೆ –1)**

ಪು. 64 ಬೆಲೆ ರೂ 30/– 2012

ಆಕರ ವಿಜ್ಞಾನಿ ಎಂದು ವಿದ್ವಾಂಸರಲ್ಲಿ ಪ್ರಸಿದ್ಧ ವಾಗಿರುವ ಶಿವಣ್ಣನವರು ಯಾವಾಗಲೂ ಮಠ ಮಾನ್ಯಗಳು, ವಿಶ್ವವಿದ್ಯಾಲಯಗಳನ್ನು ಸುತ್ತುತ್ತಾ, ಹಸ್ತ ಪ್ರತಿ ಪರಿಶೀಲಿಸುತ್ತ ಹೊಸಹೊಸ ಅನ್ವೇಷಣೆ ಮಾಡಿದವರು ಬೆಂಗಳೂರು ವಿಶ್ವವಿದ್ಯಾಲಯದ ಹಸ್ತಪ್ರತಿ ವಿಭಾಗವನ್ನು ಕಟ್ಟಿ ಬಳಸಿದವರು ಹಸ್ತ ಪ್ರತಿ ಸೂಚಿಗಳು, ವಚನ ಸಂಕಲನಗಳು, ಸ್ವರ ವಚನಗಳು, ಟೀಕಾ ಸಾಹಿತ್ಯ, ಹೀಗೆ ವೈವಿಧ್ಯಮಯ ವೈಶಿಷ್ಟಮಯ 45 ಕೃತಿಗಳನ್ನು ಕನ್ನಡ ಸಾಹಿತ್ಯಕ್ಕೆ ನೀಡಿದ್ದಾರೆ. ಶಿವಣ್ಣನವರ ಜೀವನ ಸಾಧನೆಯ ಬಗೆಗೆ ಪ್ರಸ್ತುತ ಕೃತಿ ಪೂರಕವಾಗಿದೆ. ಇದರಲ್ಲಿರುವ ಕೃತಿಗಳ ಸೂಚಿ ಸಾಹಿತ್ಯ, ಶಿವಣ್ಣನವರು ಸಂಪಾದಿಸಿದ ಕೃತಿಗಳ ಸವಿವರಗಳು ಅತ್ಯಮೂಲ್ಯ ಆಕರ ಸಂಪನ್ಮೂಲಗಳಾಗಿವೆ.

ಶ್ರೀಕಂಠಯ್ಯ (ಬಿ. ಎಂ) [ಶ್ರೀ ಕಾವ್ಯನಾಮ]

**ಇಂಗ್ಲಿಷ್ ಗೀತೆಗಳು : ಮೂಲ ಆಂಗ್ಲ ಕವನಗಳೊಂದಿಗೆ (ತೃತೀಯ ಮುದ್ರಣ)**

**[ಪ್ರಥಮ 1985, ದ್ವಿತೀಯ** 2006]

ಪು. ಥತು+192 ಬೆಲೆ ರೂ. 100/– 2013

19ನೇ ಶತಮಾನದ ಉತ್ತರ ಭಾಗದಲ್ಲಿ ಇಂಗ್ಲಿಷ್ ಸಾಹಿತ್ಯದ ಪರಿಚಯ ಲಾಭವನ್ನು ಪಡೆದ ಸಾಹಿತಿಗಳು ಜಡಗಟ್ಟಿನ ಸಂಪ್ರದಾಯ ಮಾರ್ಗವನ್ನು ತೊರೆದು ಹೊಸ ಮಾರ್ಗದಲ್ಲಿ ಕಾವ್ಯ ರಚನೆ ಮಾಡಬೇಕು, ಮಾಡಿಸಬೇಕು ಎಂಬ ಉತ್ಕಟವಾದ ಪ್ರೇರಣೆ ಹೊಂದಿದ್ದರು. 'ಶ್ರೀ' ಯವರು ಇದೇ ಪಂಕ್ತಿಗೆ ಸೇರಿದವರು, 'ಇಂಗ್ಲಿಷ್ ಗೀತೆಗಳು' ಸಂಕಲನವನ್ನು 1926ರಲ್ಲಿ ಹೊರತಂದರು, ಹೆಸರು ಭಾವ ಮುಂತಾದವು ಕನ್ನಡತನಕ್ಕೆ ಹೊಂದಿಕೆಯಾಗುವಂತೆ ಮಾರ್ಪಾಡಾಗಿದ್ದರೂ, ಪದ ಪ್ರಯೋಗ, ಶೈಲಿ, ಛಂದಸ್ಸು, ಭಾವರ ಸಲು....ಮೂಲ ಕವಿಯ ವ್ಯಕ್ತಿತ್ವವನ್ನು ಅನುಸರಿಸಿದೆ. 'ಶ್ರೀ' ಯವರ ಮನಸ್ಸಿಗೆ ಒಪ್ಪಿಬಂದ ಇಂಗ್ಲಿಷ್ ಕವಿತೆಗಳನ್ನು ಆಯ್ಕೆ ಮಾಡಿ ಕನ್ನಡೀಕರಿಸಲಾಗಿತ್ತು. ಪ್ರಸ್ತುತ ಸಂಕಲನದಲ್ಲಿ 60 ಅನುವಾದಿನದ ಕನ್ನಡ ಕತೆಗಳಿದ್ದು ಹಾಗೂ ಅವುಗಳ ಇಂಗ್ಲಿಷ್ ಮೂಲ ರೂಪವನ್ನೂ ಒದಗಿಸಲಾಗಿದೆ. ಇದು ಕನ್ನಡ ನವೋದಯ ಕಾವ್ಯದ ಆಚಾರ್ಯ ಕೃತಿ.

ಶ್ರೀನಿವಾಸರಾವ್ (ಎಸ್.ವಿ)

**ಬೆಟಗೇರಿ ಕೃಷ್ಣ ಶರ್ಮ : ಜೀವನ ಪರಿಚಯ**

**(ಸಾಹಿತಿ ವಿದ್ವಾಂಸರ ಕಿರು ಪುಸ್ತಕ ಮಾಲೆ – 2)**

ಪು. ೨೩+44 ಬೆಲೆ ರೂ. 20/– 2012

ಕನ್ನಡ ನವೋದಯ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ವಿಫುಲವಾಗಿ ಕೃಷಿ ಮಾಡಿ ಕನ್ನಡ ಸಾರಕ್ಷತ ಲೋಕವನ್ನು ಶ್ರೀಮಂತಗೊಳಿಸಿದ ಗಣ್ಯರಲ್ಲಿ ಬೆಟಗೇರಿ ಕೃಷ್ಣ ಶರ್ಮರು ಅಗ್ರ ಪಂಕ್ತಿಗೆ ಸೇರುತ್ತಾರೆ. 'ಆನಂದಕಂದ' ಇವರ ಕಾವ್ಯನಾಮ, ಕೃಷ್ಣ ಶರ್ಮರ ಜೀವನ ವೃತ್ತಾಂತವನ್ನು ಸರಳ ಭಾಷೆಯಲ್ಲಿ ಸಂಕ್ಷಿಪ್ತವಾಗಿ ನಿರೂಪಿಸಲಾಗಿದೆ. ಅಂತ್ಯ ಭಾಗದಲ್ಲಿ ಡಾ. ಎಸ್. ಆರ್. ಗುಂಜಾಳ ಮತ್ತು ಡಾ. ಎಸ್. ಎಲ್. ಸಂಗಮ ಇವರು ಸಂಗ್ರಹಿಸಿ ನೀಡಿರುವ ಆನಂದ ಕಂದದ ಕೃತಿ ಸೂಚಿ, ಅವರನ್ನು ಕುರಿತು (ವ್ಯಕ್ತಿ ಮತ್ತು ಸಾಹಿತ್ಯ) ಗ್ರಂಥಗಳು **ಆನಂದ ಕಂದದ** ಸಮಗ್ರ ಸಾಹಿತ್ಯವನ್ನು ಅಧ್ಯಯನ ಮಾಡುವವರಿಗೆ ಬಹು ಉಪಯುಕ್ತ.

ಮುಳಕುಂಟಿ ರಮೇಶ್, ಸಂ.

**ಪ್ರಾಚೀನ ಕನ್ನಡ ಕಾವ್ಯ ಸಂಗ್ರಹ : ಕನ್ನಡ ನಾಡಿನ ಮಕ್ಕಳ ಕಂಠ ಪಾಠಕ್ಕಾಗಿ ಪದ್ಯಗಳು**

ಪು : ೩ು+40 ಬೆಲೆ ರೂ. 20/– 2012

ಮಕ್ಕಳ ಕಂಠಪಾಠ ಸ್ಪರ್ಧೆಗಾಗಿ ಮತ್ತು ಓದಿ ಕೊಳ್ಳುವುದಕ್ಕಾಗಿ ಎಂದು ಪ್ರಾಚೀನ ಕನ್ನಡ ಕಾವ್ಯ ಭಾಗಗಳನ್ನು ಆಯ್ದು ಸಿದ್ಧ ಪಡಿಸಿರುವ ಕೃತಿ. ಪಂಪ, ರನ್ನ, ಜನ್ನ, ಶ್ರೀವಿಜಯ, ನಾಗವರ್ಮ, ಜೇಡರ ದಾಸಿಮಯ್ಯ, ಅಕ್ಕಮಹಾದೇವಿ, ಬಸವಣ್ಣ, ಅಲ್ಲಮ ಪ್ರಭು, ಹರಿಹರ, ರಾಘವಾಂಕ, ಪುರಂದರದಾಸ, ಕನಕದಾಸ, ಚಾಯರಸ, ಸಂಚಿಹೊನ್ನಮ್ಮ, ಲಕ್ಷ್ಮೀಶ, ಸರ್ವಜ್ಞ ಮುಂತಾದವರ ಕಾವ್ಯಗಳ ಆಯ್ದ ಭಾಗಿಗಳನ್ನು ಪ್ರಸ್ತುತ ಪಡಿಸಲಾಗಿದೆ. ಈ ಮೂಲಕ ಮೂಲ ಕಾವ್ಯಗಳನ್ನು ಸಂಪೂರ್ಣವಾಗಿ ಅಧ್ಯಯನ ಮಾಡಲು ಆಸಕ್ತಿ ಬೆಳಸಿಕೊಳ್ಳಬೇಕೆಂಬ ಆಶಯವಿದೆ.

**ಶ್ರೀಧರ ಮೂರ್ತಿ (ಎನ್. ಎಸ್) ಸಂ.**

ಸೃಜನ ಸಾಹಿತ್ಯ

(ಎಂ. ವಿ. ಸೀ ವಾಚಿಕೆ – 1)

ಪು. ಥು೩+292 ಬೆಲೆ ರೂ 150/– 2012

ಎಂ. ವಿ. ಸೀ ಯವರದು ಬಹುಮುಖೀ ಆಸಕ್ತಿಗಳುಳ್ಳ ವ್ಯಕ್ತಿತ್ವ ಅವರ ಸಾಹಿತ್ಯದ ಬಹಳ ಮುಖ್ಯವಾದ ಧೋರಣೆ ಸಾಮಾಜಿಕ ಸಮನ್ವಯ ಕುರಿತಾದದ್ದು ಶ್ರೀಯುತರು ಬರವಣಿಗೆಯನ್ನು ಮಾಡಿದ ಅವಧಿ ಹೊಸಗನ್ನಡ ಸಾಹಿತ್ಯದ ಮೊದಲ ಹಂತ. ಪ್ರಾಚೀನ ಸಾಹಿತ್ದದ ಅಧ್ಯಯನ, ಆಯ್ದಕೆ ವ್ಯಾಖ್ಯಾನ ಮತ್ತು ಮರುಮೌಲ್ಯ ಮಾಪನವನ್ನು, ಹೊಸ ಮಾರ್ಗದ ಸಾಧ್ಯತೆಗಳನ್ನು ಎಂ. ವಿ. ಸೀ ಯವರು ತಮ್ಮ ಕೃತಿಗಳಲ್ಲಿ ರೂಪಿಸಿದರು. ಪ್ರಸ್ತುತ ಗ್ರಂಥಗಳು ಎಂ. ವಿ. ಸೀ ಯವರ ಸಾಹಿತ್ಯವನ್ನು ಕಥೆಗಳು, ಕಾವ್ಯ, ಕಾದಂಬರಿಗಲೂ, ನಾಟಕ, ಮಕ್ಕಳ ಸಾಹಿತ್ಯ, ಪ್ರಬಂಧಗಳು ಎಂದು ಆರು ಶೀರ್ಷಿಕೆಗಳಡಿಯಲ್ಲಿ ವಿಮರ್ಶಿಸಲಾಗಿದೆ. ಈ ಕೃತಿ ಎಂ. ವಿ. ಸು ಅವರ ಸಾಹಿತ್ಯ ಶೈಲಿಯನ್ನು, ತುಲನಿಕ ಅಧ್ಯಯನದ ಹೊಳಹನ್ನು ಅರಿಯಲು ಅನುಕೂಲವಾಗುತ್ತದೆ.

**ಸೀತಾರಾಮಯ್ಯ (ಎಂ. ವಿ)**
ಕದಂಬ : ಸಮಗ್ರ ಸಂಶೋಧನಾ ಲೇಖನಗಳ ಸಂ. ಪುಟ.
**(ಎಂ. ವಿ. ಸೀ. ಸಮಗ್ರ ಸಾಹಿತ್ಯ ಮಾಲೆ –1)**
**(ಬಿ. ಎಂ. ಶ್ರೀ ಪ್ರತಿಷ್ಠಾನದ 50 ನೇ ಪ್ರಕಟಣೆ)**
ಪು : xvi–388 ಬೆಲೆ ರೂ 100–00 / ರೂ. 80/– (ಗ್ರಂಥಾಲಯ ಪ್ರತಿ 1993

'ರಾಘವ' ಎಂಬ ಕಾವ್ಯ ನಾಮದಿಂದ ಪ್ರಸಿದ್ಧರಾದ ಪ್ರೊ. ಎಂ. ವಿ. ಸೀತಾರಾಮಯ್ಯನವರ ಸಮಗ್ರ ಸಂಶೋಧನಾ ಲೇಖನಗಳ ಸಂಪು. ಇದು ಎಂ. ವಿ. ಸಈ. ಅವರು 80ನೇ ವರ್ಷ ಪೂರೈಸುವ ನೆನಪಿಗಾಗಿ 'ಅಭಿನಂದನಾ' ಸಂಪುಟನಾಗಿ ಪ್ರಕಟವಾಗ ಬೇಕಿದ್ದು ವಿಧಿವಶಾತ್ ಅವರ ಅಕಾಲಿಕ ನಿಧನದಿಂದಾಗಿ 'ಸಂಸ್ಕರಣ' ಗ್ರಂಥವಾಗಿ ಪ್ರಕಟವಾಗಿದೆ. ಆರಂಭದಲ್ಲಿ ಎಂ. ವಿ. ಸೀ ಅವರ ಎಂಬತ್ತು ಲೇಖನ ದಶ ಸಮಗ್ರ ಸಂಪುಟ ಹೊರತರುವ ಯೋಜನೆ ಇತ್ತಾದರೂ ಪ್ರಸಕ್ತ 'ಕದಂಬ' ಕೃತಿಯಲ್ಲಿ ಸಂಶೋಧನಾ ಲೇಖನಗಳನ್ನು ಮಾತ್ರ ಸೇರಿಸಲಾಗಿದೆ.

ಈ ಕೃತಿಯಲ್ಲಿ 32 ಸಂಶೋಧನಾ ಲೇಖನಗಳಿದ್ದು ಕಾವ್ಯ ಮೀಮಾಂಸೆ ವ್ಯಾಕರಣ, ಛಂದಸ್ಸು, ಕವಿ ಕಾಲ ವಿಚಾರ ಹಾಗೂ ಸಂಶೋಧನೆ ಸಂಕೀರ್ಣ ಎಂಬ ಐದು ಶೀರ್ಷಿಕೆಗಳಡಿಯಲ್ಲಿ ಈ ಲೇಖನಗಳನ್ನು ಅಳವಡಿಸಲಾಗಿದೆ. 'ಕದಂಬ' ಶೀರ್ಷಿಕೆ ಎಂ. ವಿ. ಸೀ. ಅವರೇ ಸೂಚಿಸಿದ್ದ ಹೆಸರು. ಕನ್ನಡದ ಮೊಟ್ಟ ಮೊದಲ ರಾಜವಂಶದ ಹೆಸರಿನಿಂದ ಹಿಡಿದು ಇದಕ್ಕೆ ಅನೇಕ ಅರ್ಥಗಳಿವೆ. ಸೀತಾರಾಮಯ್ಯನವರ ಬಹುಶ್ರುತ ಪಾಂಡಿತ್ಯ ಈ ಲೇಖನಗಳಲ್ಲಿ ಸ್ಪುಟವಾಗಿ ಕಂಡು ಬರುತ್ತದೆ.

ಗೀತಾಚಾರ್ಯ (ನಾ) ಮತ್ತು ಶ್ರೀನಿವಾಸರಾವ್ (ಎಸ್. ವಿ) ಸಂ.
**ಕ. ವೆಂ. ರಾಘವಾಚಾರ್ : ಜೀವನ – ಸಾಧನೆ : ಶತಮಾನೋತ್ಸವ ವಿಚಾರಗೋಷ್ಠಿ ಲೇಖನಗಳು.**
(ಜನ್ಮ ಶತಾಬ್ಧಿ ಸ್ಮೃತಿ ಮಾಲೆ)
ಪು. 8–125, ಬೆಲೆ ರೂ 80/– 2008

ಪ್ರಸ್ತುತ ಗ್ರಂಥ ದಿನಾಂಕ 19.8.2006 ರಂದ ನಡೆದ ಕ. ವೆಂ. ರಾಘವಾಚಾರ್ ಜನ್ಮಶತಮಾನೋತ್ಸವದ ಅಂಗವಾಗಿ ಏರ್ಪಡಿಸಿದ್ದ ವಿಚಾರ ಸಂಕೀರ್ಣದಲ್ಲಿ ಮಂಡಿತವಾದ ಪ್ರಬಂಧಗಳು ಮತ್ತು ಮಾಡಿದ ಭಾಷಣಗಳ ಸಂಕಲನ, ಬಿ. ಎಂ. ಶ್ರೀ ಪ್ರತಿಷ್ಠಾನವು ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯ ಸಹಯೋಗದೊಂದಿಗೆ ಈ ಕಾರ್ಯಕ್ರಮವನ್ನು ಆಯೋಜಿಸಿತ್ತು. ಈ ಗ್ರಂಥದಲ್ಲಿರುವ 12 ಲೇಖನಗಳು ಪ್ರಖ್ಯಾತ ವಿದ್ವಾಂಸರ ರಚನೆಗಳಾಗಿದ್ದು ರಾಘವಾಚಾರ್ ಅವರ ವಿದ್ವತ್ತಿನ ವಿವಿಧ ಮುಖಗಳನ್ನು ಪರಿಚಯಿಸುತ್ತರೆ. ರಾಘವಾಚಾರ್ಯರು ನೇರವಾಗಿ ಗ್ರೀಕ್‌ನಿಂದ ಕನ್ನಡಕ್ಕೆ ಅನುವಾದ ಮಾಡಿದ ಅಪರೂಪದ ವಿದ್ವಾಂಸರು, ಅನುಬಂಧದಲ್ಲಿ ರಾಘವಾಚಾರ್ ಅವರ ಜೀವನ ವಿವರ ಮತ್ತು ಕೃತಿಗಳ ವಿವರಗಳನ್ನು ಒದಗಿಸಲಾಗಿದೆ.

ವೆಂಕಟಾಚಲಶಾಸ್ತ್ರೀ (ಟಿ. ವಿ) ಸಂ.
**ಶ್ರೀಸಾಹಿತ್ಯ ಮಣಿ ಮಾಲೆ : ಆಚಾರ್ಯ**
**ಬಿ. ಎಂ. ಶ್ರೀಕಂಠಯ್ಯನವರ ಅಸಂಕಲಿತ ಬರಹಗಳೂ, ಭಾಷಣಗಳು ಇತ್ಯಾದಿ.**
ಪು : 8+238 ಬೆಲೆ ರೂ 150/– 2008

ಆಚಾರ್ಯ ಬಿ. ಎಂ. ಶ್ರೀ ಕಂಠಯ್ಯನವರ ಬರಹಗಳ, ಭಾಷದಿಂದ ಸಮಗ್ರ ಸಂಪುಟವನ್ನು 'ಶ್ರೀಸಾಹಿತ್ಯ' ಎಂಬ ಶೀರ್ಷಿಕೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆ (ಈಗ ಕುವೆಂಪು ಅಧ್ಯಯನ ಸಂಸ್ಥೆ) 1983ರಲ್ಲಿ ಅವರ ಜನ್ಮ ಶತಮಾನೋತ್ಸವದ ಅಂಗವಾಗಿ ಪ್ರಕಟಿಸಿತ್ತು. ಆದರೆ ಬಿ. ಎಂ. ಶ್ರೀ ಯವರ ಇನ್ನು ಅನೇಕ ಬರಹಗಳೂ, ಭಾಷಣಗಳು ಸಂಕಲನಗೊಳ್ಳದೆ ಇದ್ದು ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವ ಒಂದು ಪ್ರಯತ್ನ ಇದಾಗಿದೆ. ಈ ಸಂಪುಟದಲ್ಲಿ ಒಟ್ಟು 128 ಲೇಖನಗಳಿದ್ದು ನಾಲ್ಕು ಭಾಗಗಳಾಗಿ ವಿಂಗಡಿಸಲಾಗಿದೆ – (1) ಲೇಖನಗಳು, ಭಾಷಣಗಳು, ಭಾಷಣಗಳ ವರದಿ ಹಾಗೂ ಸಾರಾಂಶಗಳು (60); (2) ಕನ್ನಡ ನುಡಿ ಸಂಪಾದಕೀಯಗಳು (33);

(3) ಮುನ್ನುಡಿಗಳು, ಸಂದೇಶಗಳು (8), ಹಾಗೂ (4) ಅಭಿನಂದನೆ, ಭಿನ್ನವತ್ತಳೆ ಶ್ರೀಯವರ ಉತ್ತರ (27), ಅನುಚಂದ್ರದಲ್ಲಿ ಶ್ರೀಯವರ ಭಾಷಣಗಳ ಉಲ್ಲೇಖಗಳು ಮತ್ತು ಕೈ ಬರಹದ ಮಾದರಿಗಳನ್ನು ಪ್ರಕಟಿಸಲಾಗಿದೆ ಕನ್ನಡ ಸಾಹಿತ್ಯದ ಅಧ್ಯಯನಕ್ಕೆ ಇದು ಒಂದು ಪ್ರಮುಖ ಆ ಕರ ಗ್ರಂಥವಾಗಿರುತ್ತದೆ.

ಗೀತಾಚಾರ್ಯ (ನಾ). ಸಂ.

**ಕನ್ನಡ ಶರಣ ಎಂ. ಆರ್. ಶ್ರೀ**

ಪು. ತು+48, ಬೆಲೆ ರೂ. 30/– 2007

ಕನ್ನಡ ಸಾಹಿತ್ಯಕ್ಕೆ ವಚನ ಸಾಹಿತ್ಯದ ಮಹತ್ವವನ್ನೂ ಅದರ ಸಂಪಾದನೆಯ ಸ್ವರೂಪವನ್ನೂ ಪರಿಚಯಿಸಿದವರಲ್ಲಿ ಪ್ರಥಮರೆನಿಸುವ ಹಾಗೂ ಶ್ರೇಷ್ಠ ಗದ್ಯ ಲೇಖಕರೂ ಆದ ಎಂ. ಆರ್. ಶ್ರೀನಿವಾಸ ಮೂರ್ತಿಯವರ ಜೀವನ ಸಾಧನೆಗಳನ್ನು ಪರಿಚಯಿಸುವ ಐದು ಲೇಖನಗಳ ಸಂಗ್ರಹ, ಬಿ. ಎಂ. ಶ್ರೀ ಪ್ರತಿಷ್ಠಾನ ನಡೆಸಿದ್ದ ಶತಮಾನೋತ್ಸವ ಸ್ಮರಣೆಯ ವಿಚಾರಗೋಷ್ಠಿಯ ಲೇಖನಗಳಿವು, ಶ್ರೀಯುತರ ವೀರಶೈವ ಅಭಿಮಾನ, ಅವರನ್ನು ಕುರಿತ ಸಾಹಿತ್ಯ ಸಮೀಕ್ಷೆ ವ್ಯಕ್ತಿ ಪರಿಚಯ ಇವುಗಳ ಸ್ಥೂಲರೂಪ ನೀಡಲಾಗಿದೆ.

ಸೀತಾರಾಮಯ್ಯ (ಎಂ. ವಿ)

**ತಿರುಕಿಯಕನಸು**

ಪು. ಥತು+96 ಬೆಲೆ ರೂ. 50/– 2010

'ರಾಘವ' ಎಂಬ ಕಾವ್ಯನಾಮದಲ್ಲಿ ಎಂ. ವಿ. ಸೀತಾರಾಮಯ್ಯನವರು ರಚಿಸಿರುವ ನಾಟಕ, ಅವರು ರಚಿಸಿದ್ದು ವೈವಿಧ್ಯಮಯ ವಸ್ತುವನ್ನು ಒಳಗೊಂಡಿರುವ ಒಂಬತ್ತು ನಾಟಕಗಳು, ಆದರೆ ಎಂ. ವಿ. ಸಈಯವರನ್ನು ನಾಟಕಕಾರರೆಂದು ಗುರುತಿಸದೆ ಅವರು ಸಾಹಿತಿ, ವಿದ್ವಾಂಸ, ಸಂಶೋಧಕರಂದೇ ಅನನ್ನಯರೆನಿಸಿಕೊಂಡಿದ್ದಾರೆ. 'ತಿರುಕಿಯ ಕನಸು' ಇತರ ನಾಟಕಗಳಿಗಿಂತ ಭಿನ್ನವಾಗಿ ವಿಶಿಷ್ಟ, ಕಾಲ್ಪನಿಕ ಕಥಾನಕವನ್ನು ಒಳಗೊಂಡ ಸುದೀಘ ನಾಡಕ, ಹಳೆಯ ಅರ್ಥಹೀನ, ಸಾಂಪ್ರದಾಯಿಕ ಸಂಪ್ರದಾಯಗಳ ಹಾಗೂ ಆಧುನಿಕ ಸಮಕಾಲೀನ ವೈಚಾರಿಕತೆಗಳ ಸಂಘರ್ಷ ಬಿಂಬಿಸಲಾಗಿದೆ.

ಶ್ರೀಕಂಠಯ್ಯ (ಬಿ. ಎಂ)

**ಕನ್ನಡ ಮಾತು ತಲೆ ಎತ್ತು ವ ಬಗೆ : ಬಿ. ಎಂ. ಶ್ರೀ .....**

100ನೇ ವರ್ಷಕ್ಕೆ

ಪು : ತು+48 ಬೆಲೆ ರೂ. 10/– 2011

ಈ ಕಿರುಹೊತ್ತಿಗೆ 1911ರ ಕರ್ನಾಟಕ ವಿದ್ಯಾವರ್ಧಕ ಸಂಘದ ವಾರ್ಷಿಕ ಸಭೆಯಲ್ಲಿ ಬಿ. ಎಂ. ಶ್ರೀಯವರು ನೀಡಿದ ಉಪನ್ಯಾಸ. ಪ್ರತಿಯೊಬ್ಬ ಕನ್ನಡಿಗನೂ ಕನ್ನಡ, ಕರ್ನಾಟಕದ ಜ್ವಲಂತ ಸಮಸ್ಯೆಗಳ ಬಗೆಗೆ ಮನನ ಮಾಡಬೇಕಾದ, ಉಪನ್ಯಾಸದಲ್ಲಿ ಚರ್ಚಿಸಿರುವ ಅಂಶಗಳ ಬಗ್ಗೆ ವಿಚಾರ ಮಾಡಬೇಕಾದ ಅಗತ್ಯವಿದೆ. ಈ ಉಪನ್ಯಾಸಕ್ಕೆ ಒಂದು ನೂರು ವರ್ಷ ತುಂಬಿದೆ ಆದರೂ ಅಂದು ಶ್ರೀಯವರು ಎತ್ತಿದ್ದ ವಿಚಾರಗಳು ಇಂದಿಗೂ ಪ್ರಸ್ತುತವಾಗಿದೆ. ಅನುಬಂಧದಲ್ಲಿರುವ ಬಿ.ಎಂ.ಶ್ರೀಯವರ ಜೀವನದ ಮೈಲಿಗಲ್ಲುಗಳು, ಕೃತಿಗಳೂ, ಬಿ. ಎಂ. ಶ್ರೀ ಕುರಿತ ಕೃತಿಗಳು ಹಾಗೂ ಬಿ. ಎಂ. ಶ್ರೀ ವಂಶವೃಕ್ಷ ಅಮೂಲ್ಯ ಹಾಗೂ ಬಲು ಉಪಯುಕ್ತ ಆ ಕರ ಸಾಮಗ್ರಿಗಳಾಗಿವೆ.

ಗೀತಾಚಾರ್ಯ (ನಾ)
**ಹಸ್ತಪ್ರತಿ ಅಧ್ಯಯನ ಶಾಸ್ತ್ರ**
**(ಎಂ. ವಿ. ಸೀ. ಶತಮಾನೋತ್ಸವ ಗ್ರಂಥಮಾಲೆ)**
ಪು. ಥು–86 ಬೆಲೆ ರೂ 50/– 2009

ಇತ್ತೀಚಿನವರೆಗೆ ಹಸ್ತಪ್ರತಿ ಅಧ್ಯಯನವನ್ನು ಗ್ರಂಥ ಸಂಪಾದನೆಯ ಭಾಗವಾಗಿ ಪರಿಗಣಿಸಲಾಗುತ್ತಿತ್ತು. ಹಸ್ತಪ್ರತಿ ಅಧ್ಯಯನವೇ ಒಂದು ಭಿನ್ನವಾದ ನೂತನ ಅಧ್ಯಯನ ಶಿಸ್ತು ಎಂದು ಎಂಬತ್ತರ ದಶಕದಲ್ಲಿ ಎಂ. ವಿ. ಸೀತಾರಾಮಯ್ಯನವರ ರಚನಾತ್ಮಕ ಕಾರ್ಯಗಳ ಫಲವಾಗಿ ಗುರುತಿಸಲಾಯಿತು. ಗ್ರಂಥ ಸಂಪಾದನೆ 'ಕೃತಿ ಕೇಂದ್ರ' ವಾಗಿದ್ದರೆ ಹಸ್ತಪ್ರತಿ ಅಧ್ಯಯನ 'ಪ್ರತಿ ಕೇಂದ್ರಿತ' ವಾಗಿರುತ್ತದೆ. ಹಸ್ತಪ್ರತಿ ಕ್ಷೇತ್ರದಲ್ಲಿ ಮೂರು ಅಧ್ಯಯನ ಶಾಖೆಗಳಿದ್ದು ಗ್ರಂಥ ಸಂಪಾದನೆ ಶಾಸ್ತ್ರ, ಹಸ್ತಪ್ರತಿ ಶಾಸ್ತ್ರ ಮತ್ತು ಹಸ್ತಪ್ರತಿ ಅಧ್ಯಯನ ಶಾಸ್ತ್ರ – ಮೂರೂ ಪ್ರತ್ಯೇಕ ಅಧ್ಯಯನ ಶಿಸ್ತುಗಳಾಗಿರುವುದಲ್ಲದೆ ಒಂದಕ್ಕೊಂದು ಪೂರಕ ಹಾಗೂ ಪೋಷಕವಾಗಿಯೂ ನಿರ್ವಹಿಸುತ್ತದೆ. ಹಸ್ತ ಪ್ರತಿ ಅಧ್ಯಯನ ಶಾಸ್ತ್ರದ ವ್ಯಾಪ್ತಿ, ಸ್ವರೂಪ ಹಾಗೂ ಮಹತ್ವಗಳನ್ನು ಸ್ಥೂಲವಾಗಿ ಈ ಕೃತಿಯಲ್ಲಿ ಪರಿಚಯಿಸಲಾಗಿದೆ. ಅನುಬಂಧದಲ್ಲಿ ನೀಡಿರುವ ಹಸ್ತ ಪ್ರತಿ ಅಧ್ಯಯನ ಕುರಿತ ಗ್ರಂಥ – ಲೇಖನಗಳ ಸೂಚಿ ಅಧ್ಯಯನ ವಿದ್ಯಾರ್ಥಿಗಳಿಗೆ ಹಾಗೂ ಸಂಶೋಧಕರಿಗೆ ಬಹು ಉಪಯುಕ್ತವಾಗಿದೆ.

ಗೀತಾಚಾರ್ಯ (ನಾ) ಮತ್ತು ದೇಶಪಾಂಡೆ (ಕೆ. ಎಸ್) ಸಂ.
**ಬಿ.ಎಂ. ಶ್ರೀಕಂಠಯ್ಯ, : ಜೀವನ ಸಾಧನೆ : ಶತಮಾನೋತ್ಸವ ವಿಚಾರ ಸಂಕಿರಣದ ಲೇಖನ ಸಂಗ್ರಹ.**
(ಬಿ. ಎಂ. ಶ್ರೀ 125ನೇ ಜನ್ಮ ವರ್ಷದ ಸ್ಮರಣೆ)
ಪು. ಥುತ–158 ಬೆಲೆ ರೂ. 100/– 2009

ಈ ಗ್ರಂಥವು 1984ರಲ್ಲಿ ಕನ್ನಡ ಸಾಹಿತ್ಯ ಅಕಾಡೆಮಿಯ ಬಿ. ಎಂ. ಶ್ರೀ ಅವರ ಜನ್ಮ ಶತಮಾನೋತ್ಸವ ಸಂದರ್ಭದಲ್ಲಿ ಧಾರವಾಡದಲ್ಲಿ ಹಮ್ಮಿಕೊಂಡಿದ್ದ ವಿಚಾರ ಸಂಕಿರಣದಲ್ಲಿ ಮಂಡಿತವಾದ ಲೇಖನಗಳ ಸಂಕಲನ, ಬಿ. ಎಂ. ಶ್ರೀ ಅವರ ಕನ್ನಡ ಸೇವೆಯ ವಿವಿಧ ಆಯಾಮಗಳನ್ನೂ, ಅವರ ಕೃತಿಗಳನ್ನೂ ನಾಡಿನ ಹಿರಿಯ ಲೇಖಕರು ವಿವೇಚಿಸಿದ್ದಾರೆ. ಶ್ರೀ ಪರಸ್ತಾವ, ಶ್ರೀಜೀವನ, ಶ್ರೀಸಾಧನ ಎಂಬ ಮೂರು ಉಪಶೀರ್ಷಿಕೆಗಳಡಿಯಲ್ಲಿ 14 ಲೇಖನಗಳನ್ನು ಸಾದರ ಪಡಿಸಲಾಗಿದೆ. ಅನುಬಂಧದಲ್ಲಿ ಬಿ. ಎಂ. ಶ್ರೀ ಜೀವನ ಪಥ, ಶ್ರೀಯವರ ಕೃತಿಗಳು ಹಾಗು ಶ್ರೀಯವರನ್ನು ಕುರಿತ ಕೃತಿ ಸೂಚಿಗಳನ್ನು ಒದಗಿಸಲಾಗಿದೆ. ಕನ್ನಡ ನವೋದಯದ ಅಧ್ಯಯನಕ್ಕೆ ಪೂರಕವಾದ ಅಮೂಲ್ಯ ಆ ಕರ ಗ್ರಂಥ.

ರಮೇಶ್ (ಬೆ. ಗೋ)
**ಮಕ್ಕಳ ಎಂ. ವಿ. ಸೀ.**
**(ಎಂ. ವಿ. ಸೀ ಶತಮನೋತ್ಸವ ಮಾಲೆ –3)**
ಪು : ತುು+58 ಬೆಲೆ. ರೂ. 20/– 20....

ಪ್ರೊ. ಎಂ. ವಿ. ಸೀತಾರಾಮಯ್ಯನವರು ಕನ್ನಡ ಸಾಹಿತ್ಯ ಶ್ರೇಷ್ಠ ದರ್ಜೆಯ ವಿದ್ವಾಂಸರು 'ರಾಘವ' ಪಾಂಡಿತ್ಯ ಪೂರ್ಣ ಸಾಹಿತ್ಯ ರಚಿಸಿದ್ದಲ್ಲದೆ, ಮಕ್ಕಳ ಸಾಹಿತ್ಯದಲ್ಲೂ ಪ್ರಮುಖರಾಗಿದ್ದಾರೆ. ಇಂತಹ ಶ್ರೇಷ್ಠ ವ್ಯಕ್ತಿಯ ಜೀವನ, ಸಾಹಿತ್ಯ ಸಾಧನೆಗಳನ್ನು ಸರಳ ಭಾಷೆಯಲ್ಲಿ ಮಕ್ಕಳಿಗಾಗಿಯೇ ರಚಿಸಿರುವ ಕೃತಿ ಇದು. ಅಂತ್ಯದಲ್ಲಿ ನೀಡಿರುವ 'ಎಂ. ವಿ. ಸೀತಾರಾಮಯ್ಯನವರ ಕೃತಿಗಳ ಸೂಚಿ' ಕನ್ನಡ ಸಾಹಿತ್ಯ ವಿದ್ಯಾರ್ಥಿಗಳಿಗೆ ಅತ್ಯಂತ ಉಪಯುಕ್ತ ಆ ಕರ ಸೂಚಿಯಾಗಿದೆ.

ಸಾವಿತ್ರಮ್ಮ ರಾಮಸ್ವಾಮಿ (ಎಚ್. ವಿ)

**ಕಾವ್ಯದ ಒಂದು ಚುಂಗನ್ನೂ ಹಿಡಿದು : ಸಾಹಿತ್ಯಕ ಪ್ರಬಂಧಗಳ ಸಂಕಲನ**

(ಬಿ. ರಾಮಸ್ವಾಮಿ ದತ್ತಿ ಮಾಲೆ – 3)

ಪು : ಘುತ+114 ಬೆಲೆ ರೂ 60/– 2010

ಈ ಕೃತಿಯಲ್ಲಿರುವ 19 ಲೇಖನಗಳನ್ನು ಮೂರು ಉಪಶೀರ್ಷಿಕೆಗಳಡಿಯಲ್ಲಿ ಅಳವಡಿಸಲಾಗಿದೆ. ಮೊದಲನೆಯ ಭಾಗ 'ಸ್ತ್ರೀ ಚಿಂತನೆ ಕುರಿತಾಗಿದ್ದು ಆಧುನಿಕ ಕಾಲದ ಸ್ತ್ರೀ ಸಂವೇದನೆಯ ಚಿತ್ರಣವಿದೆ. ಎರಡನೆಯ ಭಾಗ 'ಕಾವ್ಯ ಚಿಂತನೆ'ಯಲ್ಲಿ ಕನ್ನಡದ ಕೆಲವು ಕಾವ್ಯ ಕೃತಿಗಳನ್ನು ಸಾಹಿತಿಗಳನ್ನು ಹಾಗೂ ಅವರ ಕೃತಿಗಳನ್ನು ಸ್ಥೂಲವಾಗಿ ಸರಳಭಾಷೆಯಲ್ಲಿ ವಿಮರ್ಶಿಸಿದ್ದಾರೆ. ಮೂರನೆಯ ಭಾಗ' ಕನ್ನಡ ಚಿಂತನೆ'ಯಲಿ ಕನ್ನಡದ ಪ್ರಸ್ತುತ ಪರಿಸ್ಥಿತಿಯನ್ನು ಸರಳ ಶೈಲಿಯಲ್ಲಿ ನೀಡಿದ್ದಾರೆ. ಇಂದಿನ ಮಕ್ಕಳನ್ನೂ ಕೇವಲ ಇಂಗ್ಲೀಷ್ ಶಿಕ್ಷಣಕ್ಕೆ ಒಳಪಡಿಸದೆ, ಕನ್ನಡ ದತ್ತಲೂ ಗಮನ ಹರಿಸುವಲ್ಲಿ ಎಲ್ಲ ಪೋಷಕರ ಗುರುತರ ಕರ್ತವ್ಯವಾಗಿದೆ ಎಂದು ಲೇಖಕಿಯವರು ನಿರೂಪಿಸಿದ್ದಾರೆ.

ಸಾವಿತ್ರಮ್ಮ ರಾಮಸ್ವಾಮಿ (ಎಚ್. ವಿ)

**ಬಿರಡು ಬರಹಗಳು : ನೆನಪುಗಳ ಸಂಕಲನ** (ಬಿ. ರಾಮಸ್ವಾಮಿದತ್ತಿ ಮಾಲೆ – 2)

ಪು. xiv–74. ಬೆಲೆ ರೂ 40/– 2010

ಲೇಖಕಿಯವರ ಜೀವಿತ ಕಾಲದಲ್ಲಿ ಸಂಭವಿಸಿದ ಕೆಲವು ಘಟನೆಗಳ ಬರಹರೂಪದ ಸಂಕಲನ. ಇದರಲ್ಲಿ 26 ಲೇಖನಗಳೀವೆ. ಇವುಗಳನ್ನು ಅನುಭವದ ಲೇಖನಗಳು ಎಂದೂ ಹೆಸರಿಸಬಹುದು. ಸಮಕಾಲೀನ ಸಮಾಜದ ಬದುಕಿಗೆ ವೈಚಾರಿಕತೆಯಿಂದ ಕೂಡಿದ್ದು ಸ್ಪಂದಿಸುತ್ತಿರುವ ಜೀವನ ಚಿತ್ರಣಗಳಿವೆ. ಮಹಿಳೆಯರ ನೆನಪುಗಳ ದಾಖಲೆ ಸಾಹಿತ್ಯ ಅಪರೂಪ. ಕನ್ನಡದ ನೆನಪುಗಳ ಸಾಹಿತ್ಯದಲ್ಲಿ ಈ ಕೃತಿ ಒಂದು ವಿಶಿಷ್ಟ ಕೊಡುಗೆಯಾಗಿದೆ.

ಸಾವಿತ್ರಮ್ಮ ರಾಮಸ್ವಾಮಿ (ಎಚ್. ವಿ)

**ಸುದ್ದಿ : ಸಂಕಮ್ಮ : ಸಣ್ಣಕತೆಗಳ ಸಂಕಲನ**

(ಬಿ. ರಾಮಸ್ವಾಮಿ ದತ್ತಿ ಮಾಲೆ –1)

ಪು : xvi+96 ಬೆಲೆ ರೂ. 50/– 2010

ಈ ಕೃತಿಯಲ್ಲಿ 24 ಸಣ್ಣ ಕತೆಗಳಿದ್ದು ಮಧ್ಯಮ ವರ್ಗದ, ಸಾಂಸಾರಿಕ ವ್ಯಕ್ತಿ ಘಟನೆಗಳ ನಿರೂಪಣೆಯಾಗಿವೆ. ಇವೆಲ್ಲ ಈಗಾಗಲೇ ವಿವಿಧ ಪತ್ರಿಕೆ, ಸಂಚಿಕೆಗಳಲ್ಲಿ ಬಹುಮಟ್ಟಿಗೆ ಪ್ರಕಟವಾಗಿವೆ. ಸಾವಿತ್ರಮ್ಮನವರ ಜೀವನಾನುಭವದಿಂದ ಮೂಡಿಬಂದಿರುವ ಈ ಕಥೆಗಳ ವಸ್ತು ವೈವಿಧ್ಯಮಯವಾಗಿದೆ. ಈ ಎಲ್ಲ ಕಥೆಗಳಲ್ಲಿಯೂ ಸುದ್ದಿ ಸಂಕಮ್ಮನ ಪಾತ್ರದ ಕೊಂಡಿ ಇರುವುದರಿಂದ ಈ ಸಂಕಲನಕ್ಕೆ 'ಸುದ್ದಿ ಸಂಕಮ್ಮ' ಎಂಬ ಶೀರ್ಷಿಕೆ ನೀಡಲಾಗಿದೆ.

ಶ್ರೀಕಂಠಯ್ಯ (ಬಿ. ಎಂ. [1884–1946]

**ಆಯ್ದ ಕವನಗಳು (ದ್ವಿತೀಯ ಮುದ್ರಣ) ಪ್ರಥಮ ಮುದ್ರಣ** 1984

ಪು. ಘು+29 ಬೆಲೆ ರೂ 10/– 2011

ಬಿ. ಎಂ. ಶ್ರೀಕಂಠಯ್ಯನವರು ಆಧುನಿಕ ಕನ್ನಡ ಕಾವ್ಯವಾಹಿನಿಯಲ್ಲಿ ಹೊಸ ಪರಂಪರೆಯನ್ನೇ ಸೃಷ್ಟಿಸಿದವರು ಅವರ ಎರಡು ಕವನ ಸಂಗ್ರಹಗಳು – ಇಂಗ್ಲೀಷ್ ಗೀತೆಗಳು ಮತ್ತು ಹೊಂಗನಸುಗಳು – ಶ್ರೀಯವರ ವೈವಿಧ್ಯಮಯ ಕಾವ್ಯ ಪ್ರಯೋಗಕ್ಕೆ, ನವೋದಯ ಕಾಲ

ಪರಂಪರೆಗೆ ನಾಂದಿಯಾಗಿವೆ. ಎಂ. ವಿ. ಸೀತಾರಾಮಯ್ಯನವರು ಬಿ. ಎಂ. ಶ್ರೀ ಅವರ ಕಾವ್ಯಸುಧೆಯನ್ನು ಅಲ್ಪ ಪ್ರಮಾಣದಲ್ಲಿ ಕನ್ನಡಿಗರಿಗೆ ಪರಿಚಯಿಸುವ ಸಲುವಾಗಿ ಶ್ರೀಯವರು ಎರಡೂ ಕಾವ್ಯ ಸಂಗ್ರಹಗಳಿಂದ ಆರಿಸಿದ ಕವನಗಳ ಸಂಗ್ರಹವನ್ನು 'ಆಯ್ದ ಕವನಗಳು' ಶೀರ್ಷಿಕೆಯ ಕಿರುಹೊತ್ತಿಗೆಯನ್ನು 1984ರಲ್ಲಿ ಪ್ರಕಟಿಸಿದ್ದರು. ಬಿ. ಎಂ. ಶ್ರೀಯವರ ಕಾವ್ಯ ಕೌಶಲವನ್ನು ಅರಿಯುವುದಕ್ಕೆ ಅವರ ಇತರ ಗ್ರಂಥಗಳ ಅಧ್ಯಯನಕ್ಕೆ ಮಾಡುವುದಕ್ಕೆ ಈ ಕೃತಿ ನೆರವಾಗುತ್ತದೆ.

ಗೀತಾಚಾರ್ಯ (ನಾ) ಸಂ.
**ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟಾದ್ವೈತ.**
(ವಿಚಾರ ಗೋಷ್ಠಿ ಮಾಲೆ)
ಪು : ಥತು+148 ಬೆಲೆ ರೂ. 100/- 2009

ಕನ್ನಡ ಸಾಹಿತ್ಯದಲ್ಲಿ ದ್ವೈತ, ಅದ್ವೈತ ತತ್ವಗಳನ್ನಾಗಿಸಿದ ಅನೇಕ ಕೃತಿಗಳು ಲಭ್ಯವಿದೆ. ಆದರೆ ವಿಶಿಷ್ಠಾದ್ವೈತದ ಸಾಹಿತ್ಯ ಕೃತಿಗಳು ರಚನೆಯಾಗಿಲ್ಲ ಎಂಬ ತಪ್ಪು ತಿಳುವಳಿಕೆ ಇತ್ತು. ಆದರೆ 16ನೇ ಶತಮಾನರಿಂದಲೇ ವಿಶಿಷ್ಟಾದ್ವೈತ ಸಾಹಿತ್ಯ ಕನ್ನಡದಲ್ಲೂ ರಚನೆ ಯಾಗಿರುವುದು ಇತ್ತೀಚಿನ ಸಂಶೋಧನೆಗಳಿಂದ ತಿಳಿದು ಬಂದಿದೆ. ಪ್ರಸ್ತುತ ಗ್ರಂಥ ಬಿ. ಎಂ. ಶ್ರೀ ಸ್ಮಾರಕ ಪ್ರತಿಷ್ಠಾನದಲ್ಲಿ ನಾರಾಯಣ ಶರ್ಮ ಸಂಸ್ಕೃತಿ ಕೇಂದ್ರದ ಸಹಯೋಗದಲ್ಲಿ 15-5-2005ರಲ್ಲಿ ನಡೆದ ವಿಚಾರಗೋಷ್ಠಿಯ ಲೇಖನಗಳ ಸಂಕಲನ ಈ ಕೃತಿಯಲ್ಲಿ ವಿಶಿಷ್ಠಾದ್ವೈತ ಸಾಹಿತ್ಯದ ರಚನೆ ಅದರ ಸ್ವರೂಪ ಪ್ರಮಾಣ, ಸಾಹಿತ್ಯಿಕ ಗುಣಲಕ್ಷಣಗಳ ವಿಶ್ಲೇಷಣೆಗಳನ್ನು ಕುರಿತ ಖ್ಯಾತ ವಿದ್ವಾಂಸರಿಂದ ರಚಿತವಾದ 6 ಲೇಖನಗಳಿಗಿವೆ. ಅನುಬಂಧದಲ್ಲಿ ನೀಡಿರುವ ವಿಶಿಷ್ಟಾದ್ವೈತ ಸಾಹಿತ್ಯ ಕುರಿತ ಗ್ರಂಥ ಸೂಚಿ ಬಹುಉಪಯುಕ್ತವಾಗಿದೆ.

ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು
ಪ್ರತಿಷ್ಠಾನದ ಪ್ರಕಟಣೆಗಳ ವರ್ಣನಾತ್ಮಕ ಗ್ರಂಥ ಸೂಚಿ

ಗೀತಾಚಾರ್ಯ 9ನಾ). ಸಂ.
**ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟಾದ್ವೈತ 9 ವಿಚಾರ ಗೋಷ್ಠಿ ಮಾಲೆ)**
ಪು : ಥತು+148 ಬೆಲೆ ರೂ. 100/- 2009

ಕನ್ನಡ ಸಾಹಿತ್ಯದಲ್ಲಿ ದ್ವೈತ, ಅದ್ವೈತ ತತ್ವಗಳನ್ನಾಧರಿಸಿದ ಅನೇಕ ಕೃತಿಗಲೂ ಲಭ್ಯವಿದೆ. ಅದರೆ ವಿಶಿಷ್ಟಾದ್ವೈತದ ಸಾಹಿತ್ಯ ಕೃತಿಗಳು ರಚನೆಯಾಗಿಲ್ಲ ಎಂಬ ತಪ್ಪು ತಿಳುವಳಿಕೆ ಇತ್ತು. ಆದರೆ ಹದಿನಾರನೇ ಶತಮಾನದಿಂದಲೇ ವಿಶಿಷ್ಟಾದ್ವೈತದ ಸಾಹಿತ್ಯ ಕನ್ನಡದಲ್ಲಿ ರಚನೆಯಾಗಿರುವದು ಇತ್ತೀಚಿನ ಸಂಶೋಧನೆಗಳಿಂದ ತಿಳಿದು ಬಂದಿದೆ. ಪ್ರಸ್ತುತ ಗ್ರಂಥ ಬಿ. ಎಂ. ಶ್ರೀ ಸ್ಮಾರಕ ಪ್ರತಿಷ್ಠಾನದಲ್ಲಿ ನಾರಾಯಣ ಶರ್ಮ ಸಂಸ್ಕೃತಿ ಕೆಂದ್ರದ ಸಹಯೋಗದಲ್ಲಿ ದಿನಾಂಕ : 15. 5. 2005ರಲ್ಲಿ ನಡೆದ ವಿಚಾರಗೋಷ್ಠಿಯ ಲೇಖನಗಳ ಸಂಕಲನ. ಈ ಕೃತಿಯಲ್ಲಿ ವಿಶಿಷ್ಟಾದ್ವೈತ ಸಾಹಿತ್ಯದ ರಚನೆ. ಅದರ ಸ್ವರೂಪ, ಪ್ರಮಾಣ ಸಾಹಿತ್ಯದ ಗುಣಲಕ್ಷಣಗಳ ವಿಶ್ಷೇಷಣೆಗಳನ್ನು ಕುರಿತ ಖ್ಯಾತ ವಿದ್ವಾಂಸರಿಂದ ರಚಿತವಾದ ಆರು ಲೇಖನಗಳಿವೆ ಅನುಬಂಧದಲ್ಲಿ ನೀಡಿರುವ ವಿಶಿಷ್ಟಾದ್ವೈತ ಸಾಹಿತ್ಯ ಕುರಿತ ಗ್ರಂಥಸೂಚಿ ಬಹು ಉಪಯುಕ್ತವಾಗಿದೆ.

~ 0 ~